ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಹಾಗೆ ಕಟ್ಟಬೇಕಾದ ಕಟ್ಟಡಗಳಿಗೆ ಆಗತಕ್ಕ ಹಣವೆಲ್ಲಾ ಇರುವುದಿಲ್ಲ. ಕೆಲಕೆಲವು ಕಟ್ಟಡಗಳಿಗೆ ರಿವೈಸ್ಡ್ ಎಸ್ಟಿಮೇಟ್ ಆಗಬೇಕಾಗುತ್ತೆ. ಆಗ ಕೆಲವಕ್ಕೆ ಹಣ ಜಾಸ್ತಿಯಾಗಿ ಬೇಕಾಗಬಹುದು. ಇನ್ನು ಕೆಲವಕ್ಕೆ ಕಡಿಮೆ ಬೇಕಾಗಬಹುದು. ಹೀಗೆ ಹೆಚ್ಚುಕಡಿಮೆ ಆಗತಕ್ಕ ಸಂಭವಗಳುಂಟು.

ಶ್ರೀ ಎ. ಸುಬ್ಬರಾಯಶೆಟ್ಟರು.—ಹಾಗಾದರೆ ಅವರು ಡೊನೇಷ್ ಕೊಟ್ಟಿದ್ದರ ಮೇಲೇ ಕೆಲಸ ಪ್ರಾರಂಭವಾಗುತ್ತದೆಯೇ ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಡೊನೇಷ್ ಕೊಡತಕ್ಕವರು, ಹಣ ಕೊಟ್ಟನಂತರ ಅದು ಖಜಾನೆಯಲ್ಲಿ ಡಿಪಾಜಿಟ್ ಆಗುತ್ತೆ. ಅನಂತರ ಆ ಕಟ್ಟಡಕ್ಕೆ ಎಷ್ಟು ಹಣ ಬೇಕಾಗುತ್ತದೆಂಬುದನ್ನು ನೋಡಿಕೊಂಡು ಸರ್ಕಾರದವರು ತಮ್ಮ ಕೋಟಾ ಫಿಕ್ಸ್ ಮಾಡುತ್ತಾರೆ.

ಶ್ರೀ ಎಸ್. ರಂಗರಾಮಯ್ಯನವರು (ಮೈಸೂರು ಜಿಲ್ಲೆ).—ಸರ್ಕಾರದವರು ಈ ಕಟ್ಟಡಗಳನ್ನು ಕಟ್ಟಿಸತಕ್ಕ ಬಗ್ಗೆ, ಸ್ವಂತವಾಗಿ ಇಲಾಖೆಯವರು ಎಷ್ಟು ಕಟ್ಟಡಗಳನ್ನೂ, ಕಂಟ್ರಾಕ್ಟರುಗಳ ಮುಖಾಂತರ ಎಷ್ಟು ಕಟ್ಟಡಗಳನ್ನೂ ಕಟ್ಟಿಸಿದ್ದಾರೆ ?

Mr. SPEAKER.—That question does not arise.

ಶ್ರೀ ಎಸ್. ರಂಗರಾಮಯ್ಯನವರು.—ಟೆಂಡರ್ ಕಾಲ್‌ಫರ್ ಮಾಡಿ, ಎಷ್ಟು ಬಿಲ್ಡಿಂಗ್ ಕಂಟ್ರಾಕ್ಟುಗಳನ್ನು ಕೊಟ್ಟಿದ್ದಾರೆ ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಕೆಲವನ್ನು ಕಂಟ್ರಾಕ್ಟ್ ಮೇಲೆ ಕಟ್ಟಿಸಲಾಗಿದೆ. ಮತ್ತೆ ಕೆಲವನ್ನು ಆ ಡೋನಾರ್ಸ್‌ಗಳೇ ಪಿ. ಡಬ್ಲ್ಯು. ಇಲಾಖೆಯವರ ಪ್ಲಾನ್ ಪ್ರಕಾರ ಕಟ್ಟಿಸಿಕೊಡುತ್ತೇವೆಂದು ಅವರು ಕೆಲಸವನ್ನು ಕೈಗೊಂಡಿರತಕ್ಕ ಸಂದರ್ಭಗಳೂ ಇವೆ.

ಶ್ರೀ ಎಸ್. ರಂಗರಾಮಯ್ಯನವರು.—ಹಾಗೆ ಆ ಕಂಟ್ರಾಕ್ಟ್ ತೆಗೆದುಕೊಂಡಿರತಕ್ಕವರು ಕೆಲಸವನ್ನು ಪೂರ್ತಿಮಾಡಿದ ಮೇಲೆ ತಾನೆ ತಾವು ಅವರಿಗೆ ಹಣ ಕೊಡುವುದು ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ರೂಲ್ಸು ಪ್ರಕಾರ ಕೊಡಲಾಗುತ್ತೆ. ಕೆಲವುವೇಳೆ part-payments ಮಾಡುವುದೂ ಉಂಟು.

ಶ್ರೀ ಎಸ್. ರಂಗರಾಮಯ್ಯನವರು.—Part-payment ಕೊಡಲು ಅವಕಾಶವಿದ್ದರೆ ಕೆಲವುಕಡೆ ಕೆಲಸಗಳೇಕೆ ನಿಂತಿವೆ ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಅನೇಕ ಕಾರಣಗಳಿರಬೇಕು.

ಶ್ರೀ ಎಚ್. ಎಂ. ಚನ್ನಬಸಪ್ಪನವರು (ಮೈಸೂರು ಜಿಲ್ಲೆ).—ಎಲಿಮೆಂಟರಿ ಎಜುಕೇಷ್ ಫಂಡು ಎಂಬುದಾಗಿ ಒಂದು ಫಂಡು ಇದೆಯಲ್ಲವೆ ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಆ ರೀತಿಯಾಗಿ ಪ್ರತ್ಯೇಕವಾಗಿ ಒಂದು ಫಂಡು ಯಾವುದೂ ಇಲ್ಲ.

ಶ್ರೀ ಎಚ್. ಎಂ. ಚನ್ನಬಸಪ್ಪನವರು.—ಈ ಕಟ್ಟಡಗಳ ಬಗ್ಗೆ ತಾವೀಗ ಬಡ್ಜೆಟ್ಟಿನಲ್ಲಿ ಖಾನಲಾಗಿಟ್ಟಿರತಕ್ಕ ಮೊಬಲಗಿನಲ್ಲಿ ಯಾವ ಯಾವ ಜಿಲ್ಲೆಗೆ ಎಷ್ಟೆಷ್ಟು ಅಲಾಟ್ ಮಾಡಲಾಗಿರುತ್ತದೆಂಬುದನ್ನು ತಿಳಿಸರಾಗುತ್ತದೆಯೇ ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಯಾವ ಯಾವ ಜಿಲ್ಲೆಗಳಲ್ಲಿ ಕಟ್ಟಡಗಳ ಕೆಲಸ ಅರ್ಧಂಬರ್ಧ ಆಗಿರುತ್ತದೆಯೋ ಅಂಥಾದ್ದಕ್ಕೆಲ್ಲಾ ಮೊದಲು ಕೊಟ್ಟು ನಂತರ ಉಳಿಯುವುದನ್ನು ಆಯಾಯ ಜಿಲ್ಲೆಗಳ ಶಕ್ತ್ಯಾನುಸಾರ ಹಂಚಲಾಗುತ್ತದೆ.

ಶ್ರೀ ಎಚ್. ಎಂ. ಚನ್ನಬಸಪ್ಪನವರು.—ಹಾಗಾದರೆ ತಾವೀಗ ಯಾವ ಯಾವ ಜಿಲ್ಲೆಗಳಲ್ಲಿ ಎಷ್ಟೆಷ್ಟು ಹೀಗೆ ಅರ್ಧಂಬರ್ಧ ಕೆಲಸವಾಗಿರತಕ್ಕ ಕಟ್ಟಡಗಳು ಇರುತ್ತವೆಂಬ ಬಗ್ಗೆ ಒಂದು ಪಟ್ಟಿಯನ್ನು ತರಿಸಿದ್ದೀರಾ ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ತರಿಸಲಾಗುತ್ತೆ.

ಶ್ರೀ ಎಚ್. ಎಂ. ಚನ್ನಬಸಪ್ಪನವರು.—ನನ್ನ ಪ್ರಶ್ನೆ—'ತರಿಸಿದ್ದೀರಾ' ಎಂದು.

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಇಲ್ಲ.

ಶ್ರೀ ಎಚ್. ಎಂ. ಚನ್ನಬಸಪ್ಪನವರು.—ಅಂಥಾ ಪಟ್ಟಿಯೊಂದನ್ನು ತರಿಸಲು ಏರ್ಪಾಡು ಮಾಡುತ್ತೀರಾ ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಅಗತ್ಯವಾಗಿ.

ಶ್ರೀ ಎಚ್. ಎಂ. ಚನ್ನಬಸಪ್ಪನವರು.—ಹಾಗೆ ಪ್ರತಿಯೊಂದು ಜಿಲ್ಲೆಯಲ್ಲೂ ಅರ್ಧಂಬರ್ಧ ಕೆಲಸ ನಡೆದಿರುವಂಥ ಕಟ್ಟಡಗಳ ಬಗ್ಗೆ ಈಗ ತಾವು ಈ 3 ಲಕ್ಷ ರೂಪಾಯಿಗಳಲ್ಲಿ ಎಷ್ಟೆಷ್ಟನ್ನು ಪ್ರತಿಯೊಂದು ಜಿಲ್ಲೆಗೂ ಒದಗಿಸಿದ್ದೀರಿ ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಅದಕ್ಕೆ ಆಗಲೆ ಉತ್ತರ ಹೇಳಿದ್ದೇನೆ.

ಶ್ರೀ ಎಚ್. ಎಂ. ಚನ್ನಬಸಪ್ಪನವರು.—ಸಾರ್ವಜನಿಕರು, ಅಂದಾಜು ನಿರ್ಧರವಾದ ಮೇಲೆ, ಅದರ ಅರ್ಧ ಹಣವನ್ನು ಅವರು ಹಾಕುತ್ತೇವೆಂದರೆ, ಇನ್ನುಳಿಯತಕ್ಕ ಅರ್ಧ ಭಾಗದ ಹಣವನ್ನು ಸರ್ಕಾರದವರು ಹಾಕಲು ಆಲೋಚನೆ ಮಾಡುತ್ತೀರಾ ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಹಾಗೆ ಅರ್ಧ ಹಣವನ್ನು ಕೊಟ್ಟೇಕೊಡುತ್ತೇವೆಂದು ಹೇಳುವುದಕ್ಕಾಗುವುದಿಲ್ಲ. ಈ ಸಂಬಂಧವಾಗಿ ಶ್ರೀಮಾನ್ ಎಚ್. ಎಂ. ಚನ್ನಬಸಪ್ಪನವರೇ ಎಷ್ಟೋ ಕಡೆ ಹಣವನ್ನು ಚಂದಾ ಎತ್ತಿ ಅನೇಕ ಕಟ್ಟಡಗಳನ್ನು ಕಟ್ಟಿಸಿದ್ದಾರೆ. ಅವರಿಗೂ ಗೊತ್ತಿದೆ. ಕೆಲವು ಸಂದರ್ಭಗಳಲ್ಲಿ ಕೊಡಬೇಕಾಗಿ ಬರುತ್ತೆ. ಕೆಲವು ಸಂದರ್ಭಗಳಲ್ಲಿ ಅಂಥ ಅವಶ್ಯಕತೆಯೇನೂ ಇರುವುದಿಲ್ಲ. ಹಾಗೆ ಅವಶ್ಯಕವೆಂದು ಕಂಡುಬರುವ ಕಡೆ ಕೊಡಬಹುದು.

Increasing the Accommodation in Narasimharaja Hostel, Bangalore.

*ಪ್ರಶ್ನೆ 235.—ಲೋಕಸೇವಾನಿರತ ಎಂ. ಹನುಮಂತಯ್ಯನವರು (ಬೆಂಗಳೂರು ಡಿಸ್ಟ್ರಿಕ್ಟು—ನಿಮ್ನ ತರಗತಿಗಳವರ ಪರವಾಗಿ).—

ಈ ಕೆಳಗೆ ಕೇಳಿರುವ ಸಂಗತಿಯನ್ನು ಸರ್ಕಾರದವರು ದಯೆಯಿಟ್ಟು ತಿಳಿಸಬೇಕೆಂದು ಪ್ರಾರ್ಥನೆ:—

ಬೆಂಗಳೂರಿನಲ್ಲಿರುವ ನರಸಿಂಹರಾಜಾ ಹಾಸ್ಟಲಿನಲ್ಲಿರುವ ಸ್ಥಳಾವಕಾಶವನ್ನು (ಎಂದರೆ 'ಸೀಟು'ಗಳನ್ನು) 75ರಿಂದ 150ಕ್ಕೆ ಹೆಚ್ಚಿಸಬೇಕೆಂದು ಮನವಿಮಾಡಿರುವ ಸಂದರ್ಭಗಳು ಸರ್ಕಾರದವರ ಗಮನಕ್ಕೆ ಬಂದಿವೆಯೆ ?

ಉತ್ತರ.—ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು (ಸ್ಥಳೀಯ ಸಂಸ್ಥೆಗಳ ನಚಿವರು) on behalf of ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು (ಪ್ರಧಾನ ನಚಿವರು)].—

ಬಂದಿದೆ.

ಶ್ರೀ ಎಂ. ಹನುಮಂತಯ್ಯನವರು.—ಈ ನರಸಿಂಹರಾಜ ಹಾಸ್ಟಲಿನ ವಿಚಾರದಲ್ಲಿ ಅಲ್ಲಿ ಹುಡುಗರಿಗೆ 75 ರಿಂದ 150ಕ್ಕೆ ಅವಕಾಶ ಕಲ್ಪಿಸಿಕೊಡಬೇಕೆಂಬ ಒತ್ತಾಯ ಎಷ್ಟು ವರ್ಷಗಳಿಂದ ಬರುತ್ತದೆ;

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಬರವಣಿಗೆಯ ಮೂಲಕ ಯಾರೂ ಕೇಳಿಕೊಂಡಿಲ್ಲ. ಪ್ರತಿನಿಧಿಗಳಾಗಿರತಕ್ಕವರು ಆಗಾಗ್ಗೆ ಸರ್ಕಾರದವರಲ್ಲಿ ಈ ಬಗ್ಗೆ ಸಹಾಯಮಾಡಬೇಕೆಂದು ಕೇಳಿಕೊಂಡಿದ್ದಾರೆ.

ಶ್ರೀ ಎಂ. ಹನುಮಂತಯ್ಯನವರು.—ಹಾಗಾದರೆ 75ರಿಂದ 150ಕ್ಕೆ ಜಾಸ್ತಿ ಮಾಡಬೇಕೆಂಬ ವಿಚಾರ ಸರ್ಕಾರದವರ ಗಮನಕ್ಕೆ ಬಂದೇ ಇಲ್ಲವೇ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಈ ನಭೆಯಲ್ಲಿ ಪ್ರತಿನಿಧಿಗಳಾಗಿರತಕ್ಕವರು ತಿಳಿಸಿದ್ದರೆಂದು ಆಗಲೇ ಹೇಳಿದ್ದೇನೆ.

ಶ್ರೀ ಡಿ. ಗೋವಿಂದದಾಸರವರು (ಹಾಸನ ಜಿಲ್ಲೆ ನಿಮ್ನ ಪಂಗಡ).—ಈ ಹಾಸ್ಟಲು ಸ್ಥಾರಂಭವಾದ್ದು ಯಾವಾಗ?

ಅಧ್ಯಕ್ಷರು.—ಇನ್ನೂ ನರಿ ಹೋಯಿತು.

ಶ್ರೀ ಎಂ. ಮಾದಯ್ಯನವರು (ಮೈಸೂರು ಜಿಲ್ಲೆ ನಿಮ್ನ ಪಂಗಡ).—ಆಗಲೇ ಮಾನ್ಯ ಮಂತ್ರಿಗಳು ಸರ್ಕಾರದವರ ಗಮನಕ್ಕೆ ಕೆಲವು ಪ್ರತಿನಿಧಿಗಳು ಇದನ್ನು ತಂದಿದ್ದಾರೆಂದು ಹೇಳಿದರು. ಹಾಗೆ ಸರ್ಕಾರದವರ ಗಮನಕ್ಕೆ ತಾರದೆ ಈ ವಿಷಯವನ್ನು ಮತ್ತಾರ ಗಮನಕ್ಕೆ ತರಬೇಕಾಗಿತ್ತು?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಸರ್ಕಾರದವರಿಗೆ, ಇದ್ದ ಇರಾಖಾ ಮುಖ್ಯಧಿಕಾರಿಗಳಿಗೆ ಮತ್ತೂ ಈ ಬಾಬಿಗೆ ಸಂಬಂಧಪಟ್ಟ ಇತರೆ ಎಲ್ಲಾ ಸರ್ಕಾರಿ ಅಧಿಕಾರಿಗಳಿಗೂ ತಿಳಿಸಬೇಕು.

ಶ್ರೀ ಎಂ. ಮಾದಯ್ಯನವರು.—ಪ್ರತಿನಿಧಿಗಳು ಈ ವಿಚಾರವನ್ನು ತಮ್ಮ ಗಮನಕ್ಕೆ ತಂದದ್ದು ಯಾವಾಗ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ತಾರೀಖನ್ನು ನಾನು ಗುರ್ತು ಹಾಕ್ಕಿಕೊಂಡಿಲ್ಲ. ಆಗಾಗ್ಗೆ ಬಂದಾಗ ಅವರು ತಿಳಿಸಿದ್ದಾರೆ.

ಶ್ರೀ ಎಂ. ಮಾದಯ್ಯನವರು.—ಈ ವಿಚಾರ ಬರವಣಿಗೆಯಲ್ಲೇನಾದರೂ ಇದೆಯೇ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಇಲ್ಲವೆಂದು ಆಗಲೇ ತಿಳಿಸಿದ್ದೇನೆ.

ಶ್ರೀ ಎಂ. ಮಾದಯ್ಯನವರು.—ಈ ಬಗ್ಗೆ ವಿದ್ಯಾ ಇಲಾಖೆಯ ಡೈರೆಕ್ಟರವರ ಅಭಿಪ್ರಾಯವೇನಿರುತ್ತೆಂಬುದನ್ನು ತರಿಸಿದ್ದೀರಾ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಇಲ್ಲ.

ಶ್ರೀ ಎಂ. ಮಾದಯ್ಯನವರು.—ಸರ್ಕಾರದವರು ಈ ತನಕ ಮಂಜೂರು ಮಾಡಿದ್ದ ಸ್ಥಾನಗಳು ಸಾಲದು ಇವುಗಳನ್ನು ಇನ್ನೂ ಹೆಚ್ಚು ಮಾಡಬೇಕೆಂಬುವ ಅಗತ್ಯ ವಿರತಕ್ಕದ್ದನ್ನು ತಾವು ಮನಗಂಡಿದ್ದೀರಾ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಅದನ್ನು ಪರಿಶೀಲನೆ ಮಾಡಲಾಗುತ್ತದೆ.

ಶ್ರೀ ಎಂ. ಮಾದಯ್ಯನವರು.—Whether there is need ಅಂತ ಅನ್ನುವುದು ತಮ್ಮ ಗಮನಕ್ಕೆ ಬಂದಿಲ್ಲವೇ!

The Hon'ble Sri R. CHENNIGARAMIAH.—It is a matter of opinion, Sir.

ಶ್ರೀ ಎಂ. ಮಾದಯ್ಯನವರು.—ಸಂಸ್ಥಾನಾವಳಿ ಇವರ ಪ್ರಜಾಭಿವೃದ್ಧಿ ಹೆಚ್ಚುತ್ತಿರುವುದರಿಂದ, ಈ ಸೀಟುಗಳನ್ನು ಹೆಚ್ಚಿಸಬೇಕೆಂಬುದಾಗಿ ತಮಗೆ ಯಾರಿಂದಲೂ ಮನವಿಗಳು ಬಂದಿಲ್ಲವೇ!

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಹಾಗೆ ಡಾಕ್ಯುಮೆಂಟರಿಯಾಗಿ ಯಾರಿಂದಲೂ ಬಂದಿಲ್ಲ. I may say that the question does not arise.

Sri M. MADIAH.—It arises in this way... .....

Mr. SPEAKER.—The Hon'ble Member cannot say that when the Hon'ble Minister says it does not arise.

Sri M. MADIAH.—The question is regarding the increase in the number of seats. There are certain proposals from the Director. I want to know whether this is included in that proposal.

The Hon'ble Sri R. CHENNIGARAMIAH.—This relates to the increase of strength in the Narasimharaja Hostel. The question of increase of seats in other hostels is not before us.

Sri M. MADIAH.—I wanted to know whether this question of increasing the Number of seats of the hostels is included in that proposal?

The Hon'ble Sri R. CHENNIGARAMIAH.—I am not aware of that, Sir.

ಶ್ರೀ ಎಂ. ವೆಂಕಟೇಶ್ವರವರು (ಮಂಡ್ಯ ಜಿಲ್ಲೆ ನಿಮ್ನ ಪಂಗಡ).—ಈ ನರಸಿಂಹರಾಜ ಹಾಸ್ಟಲಿನ ನಮಿತಿಯವರಿಂದ ಯಾವ ಮನವಿಗಳೂ ತಮಗೆ ಬಂದಿಲ್ಲವೇ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಬರವಣಿಗೆಯಲ್ಲಿ ಯಾವುದೂ ಬಂದಿಲ್ಲ.

ಶ್ರೀ ಎಂ. ವೆಂಕಟೇಶ್ವರವರು.—ಬರವಣಿಗೆಯಲ್ಲಿ ಬಾರದಿದ್ದರೆ ಹೋಗಲಿ. ಬಾಯಿ ಮಾತಿನಲ್ಲಾದರೂ ಆ ಮನವಿಗಳು ಬಂದು ಎಷ್ಟು ದಿವನವಾಯಿತು?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ನಾನು ಲೆಕ್ಕ ಇಟ್ಟುಕೊಂಡಿಲ್ಲ. ಯಾವ ತಾರೀಖೋ ಏನೋ ಅಂತೂ ಬಹಳ ದಿವನಗಳಾಯಿತೆಂದು ಹೇಳಬಲ್ಲೆ. ಅಂತೂ ಹಾಗೆ ಬಹಳ ದಿವನಗಳಿಂದಲೂ ಈ ಸಂಬಂಧವಾಗಿ ಒಂದು ಅಜಿಟೇಷನ್ ಇದ್ದೇ ಇದೆ.

ಶ್ರೀ ಟಿ. ಹನುಮಯ್ಯನವರು (ಚಿತ್ರದುರ್ಗ ಜಿಲ್ಲೆ ನಿಮ್ನ ಪಂಗಡ).—ನರಸಿಂಹರಾಜ ಹಾಸ್ಟಲಿನಲ್ಲಿ ಮ್ಯಾನೇಜ್‌ಮೆಂಟ್ ನೋಡಿಕೊಳ್ಳುವಅಫಿಷಿಯರ್ ಮೆಂಬರುಗಳು ಹೆಚ್ಚಾಗಿದ್ದಾರೆಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೆ?

Mr. SPEAKER.—That does not arise out of this question.

ಶ್ರೀ ಟಿ. ಹನುಮಯ್ಯನವರು.—ಅಲ್ಲಿನ ಆಡಳಿತ ಅಷ್ಟು ಉತ್ತಮ ಸ್ಥಿತಿಯಲ್ಲಲ್ಲವೆಂಬುದನ್ನು ಗಮನಕ್ಕೆ ತರಲು ಇದನ್ನು ಕೇಳುತ್ತಿದ್ದೇನೆ.

ಅಧ್ಯಕ್ಷರು.—ಅದು ಬೇರೆ ಮಾತು. Next question No. 50. Sri H. M. Mallikarjunappa. The Hon'ble Member is not present. The question will be treated as unstarred.

Next question, No. 98. Sri K. Puttaswamy.

Economy Measures adopted in certain Departments.

*ಪ್ರಶ್ನೆ 98.—ಶ್ರೀ ಕೆ. ಪುಟ್ಟಸ್ವಾಮಿಯವರು (ಮಂಡ್ಯ ಡಿಸ್ಟ್ರಿಕ್ಟ್ ಸಾರ್ವತ್ರಿಕ ಚುನಾವಣೆಸ್ಥಾನ).—ಈ ಕೆಳಗೆ ಕೇಳಿರುವ ಸಂಗತಿಗಳನ್ನು ಸರ್ಕಾರದವರು ದಯೆಯಿಟ್ಟು ತಿಳಿಸಬೇಕೆಂದು ಪ್ರಾರ್ಥನೆ.—

(a) ಪಬ್ಲಿಕ್‌ವರ್ಕ್ಸ್ ಇಲಾಖೆ, ವ್ಯವಸಾಯ ಇಲಾಖೆ, ಪಶು ಪೋಷಣೆ ಇಲಾಖೆ (ಅನಿಮಲ್ ಹಸ್ಬೆಂಡ್ರಿ ಇಲಾಖೆ), ಉದ್ಯಾನಗಳ ಇಲಾಖೆ, ಪೋಲೀಸು ಇಲಾಖೆ ಮತ್ತು ಆಹಾರ ನರಬರಾಯಿ ಸಂಬಂಧದ ಇಲಾಖೆ—ಈ ಇಲಾಖೆಗಳಲ್ಲಿ ಅನುಸರಿಸಿರುವ ಖರ್ಚು ಖೋತಾ ಏರ್ಪಾಡುಗಳ ವಿವರಗಳು ಯಾವುವು;

(b) ಈ ಒಂದೊಂದು ಇಲಾಖೆಯಲ್ಲಿಯೂ ಖೋತಾ ಮಾಡಿದ ಹುದ್ದೆಗಳ ಸಂಖ್ಯೆ ಎಷ್ಟು;

(c) ಈ ಒಂದೊಂದು ಇಲಾಖೆಯಲ್ಲಿಯೂ ನರಿನುಮಾರಾಗಿ ಉಳಿತಾಯವಾಗುವ ಪೊಬಲಗೆಷ್ಟು?

ಉತ್ತರ.—ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು (ಹಣಕಾಸಿನ ಮತ್ತು ಕೈಗಾರಿಕೆಗಳ ಶಾಖೆಗಳ ಸಚಿವರು).—

(a) ಮತ್ತು (b) ಸಂಬಂಧಪಟ್ಟ ಸರ್ಕಾರಿ ಹುಕುಮುಗಳ ಪ್ರತಿಗಳನ್ನು ಒದಗಿಸಲಾಗಿದೆ. *

(c) ನರಿನುಮಾರಾಗಿ ಉಳಿತಾಯ ವಾಗುವ ಪೊಬಲಗೆಷ್ಟೆಂಬುದನ್ನು ಈ ಕೆಳಗೆ ಕೊಡಲಾಗಿದೆ; ಅದು ಯಾವುವೆಂದರೆ.—

	ರೂಪಾಯಿಗಳು
ವ್ಯವಸಾಯ ಇಲಾಖೆ ...	1 39,487
ಫಲಪುಷ್ಪಗಳ ಇಲಾಖೆ ...	8 712
ಪಶುಪೋಷಣೆ ಇಲಾಖೆ (' ಅನಿಮಲ್ ಹಸ್ಬೆಂಡ್ರಿ ') ಇಲಾಖೆ ...	3,12,361
ಪಬ್ಲಿಕ್‌ವರ್ಕ್ಸ್ ಇಲಾಖೆ (ಕಟ್ಟಡಗಳ ಬಾಬತು)	1,00,000
(ಸಿಬ್ಬಂದಿ ಬಾಬತು) ...	2,00,000
ಪೋಲೀಸು ಇಲಾಖೆ ...	6,17,793
ಆಹಾರ ನರಬರಾಯಿ ಸಂಬಂಧದ ಇಲಾಖೆ	25'980
ಒಟ್ಟು ...	14,04,333

ಶ್ರೀ ಕೆ. ಪುಟ್ಟಸ್ವಾಮಿಯವರು.—ರಿಟ್ರೆಂಚ್‌ಮೆಂಟ್ ಆಗಿರುವುದರಲ್ಲಿ ಜಪಾನರುಗಳನ್ನು ತೆಗೆದಿರುವುದರಿಂದ ಎಷ್ಟು ಹಣ ಉಳಿತಾಯವಾಗಿದೆ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ನೋಟೀಸ್‌ಬೇಕು.

ಶ್ರೀ ಎಚ್. ಸಿದ್ದವೀರಪ್ಪನವರು (ಚಿತ್ರದುರ್ಗ ಜಿಲ್ಲೆ) —ಹಾರ್ಟಿಕಲ್ಚರ್ ಇಲಾಖೆಗೆ ಈ ವರ್ಷ ಬಡೆಟ್ಟಿನ ಪ್ರಕಾರ ಸುಮಾರು 8—9 ಲಕ್ಷ ರೂಪಾಯಿಗಳನ್ನು ಖರ್ಚುಮಾಡುತ್ತೀರಲ್ಲವೆ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಅದನ್ನು ಬಡ್ಜೆಟ್ಟಿನಲ್ಲೇ ತೋರಿಸಿದೆ.

ಶ್ರೀ ಎಚ್. ಸಿದ್ದವೀರಪ್ಪನವರು.—ಆ ಇಲಾಖೆಯಲ್ಲಿ ಬಹಳ ಅತ್ಯಾವಶ್ಯಕವಾಗಿ ರಿಟ್ರೆಂಚ್ ಮಾಡಬೇಕಾಗಿದೆಯೆಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೆ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಇಲ್ಲ. ಆ ಇಲಾಖೆಯಿಂದ ಬಹಳ ಉಪಯೋಗವಾಗುತ್ತಿದೆ. ತರ್ಕಾರಿ ಬೆಳೆಯುವುದು, ಹೂವುಗಳನ್ನು ತರಹೇವಾರಿ ಬೆಳೆಯುವುದು, ಮುಂತಾದ ಕೆಲಸ ಅಲ್ಲಿ ನಡೆಯುತ್ತಿರುವುದು ಮೈಸೂರು ದೇಶಕ್ಕೆ ಪ್ರಗತಿದಾಯಕವಾಗಿದೆ. ಆದ್ದರಿಂದ ಅಲ್ಲಿ ಖೋತಾಮಾಡುವುದು ಸರಿಯಲ್ಲ.

ಶ್ರೀ ಎಚ್. ಸಿದ್ದವೀರಪ್ಪನವರು.—ಆ ಇಲಾಖೆಯಲ್ಲಿ ಸಂಬಳಸಾರಿಗೆಗೆ ಹೆಚ್ಚು ಖರ್ಚಾಗುತ್ತಿದೆಯಲ್ಲವೆ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಇಲ್ಲ.

Rajamantrapravina H. B. GUNDAPPA GOWDA (Hassan District—General).—In the Animal Husbandry Department, a saving of Rs. 3,17,000 has been shown. I want to know how this large saving has been shown in this important Department?

The Hon'ble Sri H. C. DASAPPA.—Saving in the normal budget for implementing the scheme of Cattle farming etc., Rs. 1,85,841 and Saving under post-war composite scheme in Hessaraghatta Farm etc., Rs. 1,76,000; these two items make up a total saving of Rs. 3,17,000.

Sri H. B. GUNDAPPA GOWDA.—Is it a fact that it is not retrenchment on a permanent scale?

The Hon'ble Sri H. C. DASAPPA.—You can take it as provisionally permanent. It is for the moment permanent. Supposing the policy changes and they want the District Poultry Farm and so forth, then we have got to provide for money.

Sri H. B. GUNDAPPA GOWDA.—Does it not come under savings instead of retrenchment according to Government plan?

The Hon'ble Sri H. C. DASAPPA.—It is retrenchment; we save so much amount and it is retrenchment.

Sri H. B. GUNDAPPA GOWDA.—This is a new definition of retrench-

---

* Copies placed in the Assembly Library.